# ಬೆಂಗಳೂರು ಉಪನಗರ ರೈಲು ಸೇವೆ



## ಬೆಂಗಳೂರಿನಾಚೆಗಿನ ಬೆಳವಣಿಗೆಯ ವಾಗ್ದಾನ




ಉಪನಗರ ರೈಲಿಗಾಗಿ ಬೆಂಗಳೂರಿನ ನಾಗರೀಕರ ಒಂದು ಪ್ರಚಾರ

## ಇಂದಿನ ಬೆಂಗಳೂರಿನ ಜನಸಂಖ್ಯೆ




## ವಾಹನಗಳು




## ಪರಿಣಾಮ



## ಪರಿಹಾರ- ಹೊಸ ಬೆಳವಣಿಗೆ ಕೇಂದ್ರಗಳ ಅಭಿವೃದ್ಧಿ

ಭೂಸಾರಿಗೆ ಇಲಾಖೆ (ಡಲ್ಟ್)ಗೆ ನೀಡಿದ ರೈಟ್ಸ್ ವರದಿ ಹೇಳುವಂತೆ ಭಾರತೀಯ ರೈಲಿನ ಉತ್ತಮ ಸಂಪರ್ಕ ವ್ಯವಸ್ಥೆ ಇದಾಗಲೇ ಬೆಂಗಳೂರಿನ ಹೃದಯ ಭಾಗದಲ್ಲಿ ಲಭ್ಯವಿದೆ. ಮುಂಬೈ, ಚೆನ್ನೈ ಮತ್ತು ಹೈದರಾಬಾದುಗಳಲ್ಲಿರುವಂತೆ ಈ ಹಳಿಗಳನ್ನು ನಗರ ಸಾರಿಗೆ ವ್ಯವಸ್ಥೆಗೆ ಇತರೆ ಮಾಧ್ಯಮಗಳಿಗಿಂತ ಕಡಿಮೆ ಖರ್ಚಿನಲ್ಲಿ ಅಭಿವೃದ್ಧಿಪಡಿಸಬಹುದು. ರಾಮನಗರ, ಮಂಡ್ಯ, ತುಮಕೂರು, ದೊಡ್ಡಬಳ್ಳಾಪುರ, ಬಂಗಾರಪೇಟೆ, ಹೊಸೂರು, ಮುಂತಾದ ಪಟ್ಟಣಗಳನ್ನು ಬೆಂಗಳೂರಿನೊಂದಿಗೆ ಕ್ಷಿಪ್ರ ಮತ್ತು ದಕ್ಷತೆಯ ಉಪನಗರ ರೈಲು ವ್ಯವಸ್ಥೆಯಿಂದ ಬೆಸೆಯುವುದರಿಂದ ವಿವಿಧೊದ್ದೇಶಗಳನ್ನು ಪೂರೈಸಬಹುದು.




## ನಗರವನ್ನು ಪುರ, ಪಟ್ಟಣಗಳೊಂದಿಗೆ ಬೆಸೆಯುವಿಕೆ

ಸುತ್ತಮುತ್ತಲಿನ ಉಪನಗರ, ಪುರ, ಪಟ್ಟಣಗಳಲ್ಲಿ ವಾಸಿಸುವ, ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿರುವ ಜನರು ಬೆಂಗಳೂರಿನಲ್ಲಿ ವಾಸಿಸದೆ ತಮ್ಮ ಕಾರ್ಯಚಟುವಟಿಕೆಗಳನ್ನು ಮಾಡಬಹುದಾಗಿದೆ. ಕಡಿಮೆ ಸಮಯ ಮತ್ತು ಖರ್ಚಿನಲ್ಲಿ ಬೆಂಗಳೂರಿಗೆ ಬಂದು ಹೋಗುವ ವ್ಯವಸ್ಥೆ ಕಲ್ಪಿಸುವುದರಿಂದ ಬೆಂಗಳೂರಿನ ಮೇಲಿನ ಒತ್ತಡ ನೀಗಿಸಬಹುದಾಗಿದೆ. ನೀರು, ವಾಯುಮಾಲಿನ್ಯ, ಜನಸಂಖ್ಯೆ, ಸಂಚಾರ ಒತ್ತಡಗಳ ನಿರ್ವಹಣೆಯಲ್ಲಿ ಸಹಕಾರಿಯಾಗುವುದು. ಬೆಂಗಳೂರು ಸುತ್ತಮುತ್ತಲಿನ ಪ್ರಯಾಣಿಕರು ದೂರದೂರಿನ ರೈಲುಗಳಲ್ಲಿ ಪ್ರಯಾಣಿಸುವಾಗಿನ ಒತ್ತಡವನ್ನು ನಾವು ಕಾಣಬಹುದು.

> *"...ಜನರು ತಮ್ಮಿಚ್ಛೆಯಂತೆ ಬದುಕಲು ಆಕರ್ಷಿಸದ ಯಾವುದೇ ಪಟ್ಟಣವು ಅಭಿವೃದ್ಧಿ ಹೊಂದಲಾರದು..." - ಜೋನಾಥನ್ ಬಾರ್ನೆಟ್*

## ಬೆಂಗಳೂರು ಉಪನಗರ ರೈಲು ಸೇವೆ



ಪ್ರಸ್ತಾವಿತ ಉಪನಗರ ರೈಲು ಸೇವೆಯು ಹಾಲಿ ಇರುವ ಹಳಿಗಳನ್ನು ಉಪಯೋಗಿಸಿಕೊಂಡು ಬೆಂಗಳೂರನ್ನು ಸುತ್ತಮುತ್ತಲಿನ ಉಪನಗರಗಳನ್ನು ಮುಂಬೈ ಉಪನಗರ ರೈಲುಗಳಂತೆ ಸಂಪರ್ಕಿಸಲಿದೆ. ಡಲ್ಟ್‌ಗೆ ನೀಡಿದ ರೈಟ್ಸ್ ವರದಿಯು ಬೆಂಗಳೂರನ್ನು ಸುತ್ತಮುತ್ತಲಿನ ಪುರ, ಪಟ್ಟಣಗಳೊಂದಿಗೆ ಸಂಪರ್ಕಿಸುವ ೪೦೫ ಕಿ.ಮೀ. ರೈಲು ಸಂಚಾರ ಜಾಲವನ್ನು ಪ್ರಸ್ತಾಪಿಸಿದೆ.




ಉಪನಗರ ರೈಲು ಸಂಪರ್ಕಿಸುವ ಬೆಳವಣಿಗೆ ಕೇಂದ್ರಗಳಾದ ಪುರ, ಪಟ್ಟಣಗಳನ್ನು ಹಸಿರು ಚುಕ್ಕೆಗಳಿಂದ ಗುರುತಿಸಲಾಗಿದೆ. ಈ ಬೆಳವಣಿಗೆ ಕೇಂದ್ರಗಳು ಬೆಂಗಳೂರಿಗೆ ಹತ್ತಿವಿದ್ದರೂ ಹೆಚ್ಚಿನ ಜನಸಾಂದ್ರತೆಯಿರದಿರುವುದಿಂದ ಹೆಚ್ಚು ಮಹತ್ವವುಳ್ಳವಾಗಿವೆ. ಬೆಂಗಳೂರಿನಿಂದ ಒಂದು ಘಂಟೆಯೊಳಗೆ ತಲುಪಬಹುದಾದ ಈ ಸ್ಥಳಗಳ ವ್ಯವಸ್ಥಿತ ಬೆಳವಣಿಗೆಗೆ ಹೆಚ್ಚಿನ ಅವಕಾಶಗಳಿವೆ. ಈ ಪುರ, ಪಟ್ಟಣಗಳ ಸುತ್ತಮುತ್ತಲಿನ ಪ್ರದೇಶಗಳೂ ಈ ರೈಲು ಸಂಪರ್ಕದಿಂದ ಬೆಳವಣಿಗೆ ಹೊಂದಲು ಅವಕಾಶಗಳಿವೆ.

## ಪ್ರಸ್ತಾವಿತ ಉಪನಗರ ರೈಲು ಮಾರ್ಗಗಳು

| |
|---|
| ಯಶವಂತಪುರ-ಯಲಹಂಕ-ದೇವನಹಳ್ಳಿ-ದೊಡ್ಡಬಳ್ಳಾಪುರ |
| ಬೆನ್ನಿಗಾನಹಳ್ಳಿ-ಯಲಹಂಕ-ದೊಡ್ಡಬಳ್ಳಾಪುರ |
| ಯಶವಂತಪುರ-ಬೆನ್ನಿಗಾನಹಳ್ಳಿ-ಆನೇಕಲ್-ಹೊಸೂರು |
| ತುಮಕೂರು/ನೆಲಮಂಗಲ-ಯಶವಂತಪುರ-ಬೆನ್ನಿಗಾನಹಳ್ಳಿ |
| ಯಲಹಂಕ-ವೈಟ್‌ಫೀಲ್ಡ್-ಮಾಲೂರು-ಬಂಗಾರಪೇಟೆ |
| ಯಲಹಂಕ-ನಗರ-ಕೆಂಗೇರಿ-ರಾಮನಗರ-ಮಂಡ್ಯ |

## ಉಪನಗರ ರೈಲಿನ ವ್ಯಾಪ್ತಿ

- ಪ್ರಸ್ತಾವಿತ ಉಪನಗರ ರೈಲು ಈ ಜನರನ್ನು ತಲುಪಲಿದೆ

೮ ಲೋಕಸಭೆ ಕ್ಷೇತ್ರಗಳು - ಬೆಂಗಳೂರು ಉತ್ತರ - ಬೆಂಗಳೂರು ಕೇಂದ್ರ - ಬೆಂಗಳೂರು ದಕ್ಷಿಣ - ಬೆಂಗಳೂರು ಗ್ರಾಮಾಂತರ - ತುಮಕೂರು - ಚಿಕ್ಕಬಳ್ಳಾಪುರ - ಕೋಲಾರ - ಮಂಡ್ಯ

- ೪೭ ವಿಧಾನಸಭೆ ಕ್ಷೇತ್ರಗಳು
- ೧೦ ಲಕ್ಷ ಪ್ರಯಾಣಿಕರು ಪ್ರತಿ ದಿನ

## ಆರ್ಥಿಕತೆ - ಹೂಡಿಕೆಯಿಂದ ಆದಾಯ

- ಪ್ರತಿ ೧೦೦ ರೂಪಾಯಿಗಳ ಹೂಡಿಕೆಯಿಂದ ೬೦೦ ರೂಪಾಯಿಗಳ ಸಂಪಾದನೆ
- ೮,೦೦೦ ಕೋಟಿ ಹೂಡಿಕೆಯಿಂದ ೪೮,೦೦೦ ಕೋಟಿ ಸಾವಿರದಷ್ಟು ಆದಾಯ
- ಕರ್ನಾಟಕ ಸರ್ಕಾರಕ್ಕೆ ಕಂದಾಯ ಮತ್ತು ಸ್ವೀಕೃತಿಗಳಿಂದ ೧,೫೦೦ ಕೋಟಿ ಆದಾಯ
- ಇತರೆ ಸಾರಿಗೆ ವ್ಯವಸ್ಥೆಯನ್ನು ಬಳಸದೆ ಇರುವುದರಿಂದ ೧೦,೦೦೦ ಕೋಟಿ ಉಳಿತಾಯ

## ಉಪನಗರ ರೈಲಿನ ಹೋಲಿಕೆ




**ಉಪನಗರ ರೈಲಿಗಾಗಿ ಬೆಂಗಳೂರಿನ ನಾಗರೀಕರ ಒಂದು ಪ್ರಚಾರ**

# ಬೆಂಗಳೂರು ಉಪನಗರ ರೈಲು ಸೇವೆ ಅಂಶಗಳು

| ಸ್ಥಳ | ಬೆಂಗಳೂರು, ಕರ್ನಾಟಕ |
|---|---|
| ಸಾರಿಗೆ ವ್ಯವಸ್ಥೆ | ಲಭ್ಯವಿರುವ ಹಳಿಗಳ ಮೇಲಿನ ಸಮೂಹ ಸಾರಿಗೆ ವ್ಯವಸ್ಥೆ |
| ವಿಭಾಗ | ದೈನಿಕ ಪ್ರಯಾಣ |
| ಪ್ರಸ್ತಾವಿತ ಹಾದಿಗಳು | ೬ |
| ತಲುಪಬಹುದಾದ ಜನಸಂಖ್ಯೆ | ೫.೫ ಮಿಲಿಯನ್ |
| ಉಪನಗರ ರೈಲು ಸಂಪರ್ಕಿಸುವ ಉಪನಗರಗಳು | ಪೀಣ್ಯ, ಜಾಲಹಳ್ಳಿ, ಯಲಹಂಕ, ಹೆಬ್ಬಾಳ, ಕೃಷ್ಣರಾಜಪುರ, ವೈಟ್‌ಫೀಲ್ಡ್, ಸರ್ಜಾಪುರ, ಎಲೆಕ್ಟ್ರಾನಿಕ್ಸ್ ಸಿಟಿ, ನಾಯಂಡಹಳ್ಳಿ, ಕೆಂಗೇರಿ |
| ಉಪನಗರ ರೈಲು ಸಂಪರ್ಕಿಸುವ ಪಟ್ಟಣಗಳು | ತುಮಕೂರು, ನೆಲಮಂಗಲ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಮಾಲೂರು, ಬಂಗಾರಪೇಟೆ, ಆನೇಕಲ್, ಹೊಸೂರು, ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು ಮತ್ತು ಮಂಡ್ಯ |
| ಜಾಲದ ಉದ್ದ | ೪೦೫ ಕಿ.ಮೀ. |
| ವ್ಯಾಪ್ತಿ | ಬೆಂಗಳೂರಿನಿಂದ ೭೦-೧೦೦ ಕಿ.ಮೀ. |
| ನಗರ ಕೇಂದ್ರವನ್ನು ಪುರ, ಪಟ್ಟಣಗಳಿಂದ ತಲುಪುವ ಸಮಯ | ೬೦-೯೦ ನಿಮಿಷಗಳು |
| ಕಾಮಗಾರಿಯ ಸಮಯ | ಹಂತ ೧ಎ - ೨ ವರ್ಷಗಳು, ಹಂತ ೧ಬಿ - ೨ ವರ್ಷಗಳು ಮತ್ತು ಹಂತ ೨ - ೩ ವರ್ಷಗಳು |
| ಹೂಡಿಕೆ | ಒಟ್ಟು ೮,೦೦೦ ಕೋಟಿ ರೂಪಾಯಿಗಳು |
| | ಹಂತ ೧ಎ - ೩,೪೦೦ ಕೋಟಿ, ಹಂತ ೧ಬಿ - ೨,೩೦೦ ಕೋಟಿ ಮತ್ತು ಹಂತ - ೨ |
| ೨,೫೦೦ ಕೋಟಿ ರೂಪಾಯಿಗಳು | |
| ನಿರ್ಮಾಣ ವೆಚ್ಚ (ಪ್ರತಿ ಕಿ.ಮೀ) | ೧೫-೨೦ ಕೋಟಿ ಪ್ರತಿ ಕಿ.ಮೀ. (ಮೆಟ್ರೋ - ೨೦೦-೪೦೦ ಕೋಟಿ/ಕಿ.ಮೀ) |
| ದೈನಿಕ ಪ್ರಯಾಣಿಕರು | ಕಾಮಗಾರಿ ಪೂರ್ಣಗೊಂಡಾಗ ೨.೫ ಮಿಲಿಯನ್ |
| ದೈನಿಕ ಸೇವೆ | ೪೬೦ |
| ರೇಕುಗಳ ಸಂಖ್ಯೆ | ೭೮ |
| ಪ್ರತಿ ರೇಕಿಗಿರುವ ಕಾರುಗಳ ಸಂಖ್ಯೆ | ೧೫ |
| ಪ್ರತಿ ರೇಕಿನ ಪೂರ್ಣ ಪ್ರಮಾಣ | ೩,೦೦೦ (೨೦೦ ಜನ ಪ್ರತಿ ಕಾರ್) ಪ್ರಯಾಣಿಕರು |
| ಒತ್ತಡ ವೇಳೆಯ ಸಂಚಾರ | ೫-೧೦ ನಿಮಿಷಕ್ಕೊಂದು |
| ಬಿಡುವಿನ ವೇಳೆಯ ಸಂಚಾರ | ೧೫-೨೦ ನಿಮಿಷಕ್ಕೊಂದು |
| ಸಮಯ | ೨೪/೭ |
| ನಿಲ್ದಾಣಗಳ ಸಂಖ್ಯೆ | ಹಾಲಿ ಇರುವುದು - ೬೦, ಹೊಸದು - ೪೫, ಒಟ್ಟು – ೧೦೫ |
| ಹಳಿಗಳ ಗೇಜ್ | ವಿಸ್ತರಿತ ಗೇಜ್ (ಬ್ರಾಡ್ ಗೇಜ್) |
| ಕಾರ್ಯಾಚರಣೆಯ ಖರ್ಚು (ಪ್ರತಿ ಕಿ.ಮೀ) | ೨೨ ರೂಪಾಯಿಗಳು |

ಉಪನಗರ ರೈಲಿಗಾಗಿ ಬೆಂಗಳೂರಿನ ನಾಗರೀಕರ ಒಂದು ಪ್ರಚಾರ